ಉದ್ದೇಶಿಸುವವರು, ಜನರಿಗೆ ಸವಲತ್ತುಗಳನ್ನು ಒದಗಿಸಬೇಕೆಂದು ಆಲೋಚಿಸುವವರಿಗೆ ತೆರಿಗೆಯನ್ನು ವಸೂಲು ಮಾಡುವ ತುರ್ತೂ ಇರುತ್ತದೆ. ತೆರಿಗೆಯನ್ನು ಯಾವ ರೀತಿಯಿಂದ ಪ್ರತಿಪಾದಿಸಬೇಕು? ಅದನ್ನು "ಭಾರ" ಎನ್ನಬೇಕೆ, ಅಥವಾ ರಾಷ್ಟ್ರ ನಿರ್ಮಾಣಕ್ಕೆ ದೇಣಿಗೆ ಎನ್ನಬೇಕೇ? ಯಾವ ಭಾಷಾಪ್ರಯೋಗ ಮಾಡುತ್ತೇವೆನ್ನುವುದು ಆಸಕ್ತಿಯ ವಿಷಯ.

ಹಿಂದೆಯೂ ಆನಂದ್ ಗಿರಿಧರದಾಸ್ ಸ್ವಸಹಾಯ ಸಂಸ್ಥೆಗಳ ಆಷಾಢಭೂತಿತನದ ಬಗ್ಗೆ ಬರೆದಿದ್ದಾರೆ. ಎಡಬಲಪಂಥಗಳ ನಡುವೆ ನಿಂತು ಸಾವಧಾನವಾಗಿ ಎರಡೂ ಬದಿಯಿಂದ ಬರುತ್ತಿರುವ ವಾದ ಪ್ರತಿವಾದ ಮತ್ತು ಸ್ಲೋಗನ್ನುಗಳನ್ನು ಬಿಡಿಸಿ ನೋಡುವತ್ತ ಅವರ ಪುಸ್ತಕ ಕೆಲಸ ಮಾಡುತ್ತದೆ. ಸುಳ್ಳು ಸುದ್ದಿಗಳು ಹಬ್ಬುತ್ತಿರುವ ಈ ಸಮಯಕ್ಕೆ ಸಾವಧಾನವಾಗಿ ಚರ್ಚೆ, ಚರ್ಚೆಯ ಮೂಲಕ ಒತ್ತಾಯ ಸಾಧ್ಯವಿಲ್ಲ ಎಂದು ನಂಬುವ ಕಾಲಕ್ಕೆ ಈ ಪುಸ್ತಕದಲ್ಲಿರುವ ಅನೇಕ ಉದಾಹರಣೆಗಳು ಮನಸ್ಸನ್ನು ಬದಲಾಯಿಸಿಕೊಳ್ಳಲು ಪ್ರೇರೇಪಿಸುತ್ತವೆ. ಒತ್ತಾಯವು ಸಾಧ್ಯವೆಂದು ನಂಬುವುದಕ್ಕೆ ನಮ್ಮನ್ನು ಒತ್ತಾಯಿಸುತ್ತದೆ.

ನಮ್ಮ ಸಂದರ್ಭಕ್ಕೆ ಈ ವಾದವನ್ನು ಅಳವಡಿಸಿ ನೋಡಿದಾಗ - ಸಂವಹನದ ಮತ್ತು ಮಾತುಕತೆಯ – ಒತ್ತಾಯದ ತಂತ್ರವನ್ನು ಒಂದು ವಿಚಿತ್ರ ರೀತಿಯಲ್ಲಿ ನಮ್ಮ ಪ್ರಧಾನಿಯವರು ತಮ್ಮದಾಗಿಸಿಕೊಂಡಿರುವುದನ್ನು ನಾವು ನೋಡಿದ್ದೇವೆ. ಆದರೆ, ಅವರನ್ನು ವಿರೋಧಿಸುವವರಿಗೆ ಅಷ್ಟು ಚತುರತೆಯ ಒತ್ತಾಯ ಮಾರ್ಗಗಳು ಕಂಡಿಲ್ಲವೆಂದೇ ಅನ್ನಿಸುತ್ತದೆ.

ಉದಾಹರಣೆಗೆ ಶ್ರೀಮಂತರನ್ನು ಅಡುಗೆ ಅನಿಲದ ಸಬ್ಸಿಡಿಯನ್ನು ಬಿಟ್ಟುಕೊಡಲು ಪ್ರಧಾನಿ ಮೊದಲಿಗೆ ಗಿವ್ ಇಟ್ ಅಪ್ ಎನ್ನುವ ಕರೆ ನೀಡಿದರು. ಇದು ಮೂಲತಃ ನೀತಿಯ ವಿಷಯ. ಸಬ್ಸಿಡಿಯನ್ನು ರದ್ದು ಮಾಡುವ ನಿಯಮವನ್ನು ಸರಳವಾಗಿ ಜಾರಿ ಮಾಡಬಹುದಿತ್ತು. ಆದರೆ, ಆ ನಿಯಮವನ್ನು ತರುವುದಕ್ಕೆ ಒಂದು ಸಂದರ್ಭವನ್ನು ಪ್ರಧಾನಮಂತ್ರಿಗಳು ಸೃಷ್ಟಿ ಮಾಡಿದರು. ಹೀಗೆ ಸ್ವಯಂಪ್ರೇರಿತರಾಗಿ ಹಲವು ಜನರು ಸಬ್ಸಿಡಿಯನ್ನು ಬಿಟ್ಟುಕೊಟ್ಟನಂತರ ನಿಯಮವನ್ನು ಜಾರಿಮಾಡಲಾಯಿತು. ನಿಯಮ ಜಾರಿಯಾಗುವ ಕಾಲಕ್ಕೆ ಬರಬಹುದಾಗಿದ್ದ ವಿರೋಧವನ್ನು ಕುಂಠಿತಗೊಳಿಸುವಲ್ಲಿ ಈ ಕ್ರಿಯೆ ಯಶಸ್ವಿಯಾಗಿತ್ತು. ಕಥನವನ್ನು ಕಟ್ಟುವುದಕ್ಕೆ ಇದು ಒಂದು ಉತ್ತಮ ಉದಾಹರಣೆ ಎಂದು ನಾವು ಹೇಳಬಹುದು.

ಅಷ್ಟೇನೂ ಉತ್ತಮವಲ್ಲದ ಖಾಲಿ ವಾದವಿದ್ದ ಉದಾಹರಣೆ ನೋಟು ರದ್ದತಿಗೆ ಸಂಬಂಧಿಸಿದ್ದಾಗಿತ್ತು. ಅಲ್ಲಿ ಉಪಯೋಗಿಸಿದ ಒತ್ತಾಯದ ವಾದ, ನಿಜಕ್ಕೂ ಪೊಳ್ಳಾಗಿತ್ತು. ಹೀಗಿದ್ದೂ ಸರ್ಕಾರ ಮತ್ತು ಪ್ರಧಾನಿಗಳ ಪ್ರಚಾರತಂತ್ರ ಸಫಲವಾಯಿತು. 50ದಿನಗಳ ಸಮಯ ಕೇಳಿ, ಅದರ ಉದ್ದೇಶವನ್ನು ಭ್ರಷ್ಟಾಚಾರದ ಉಚ್ಚಾಟನೆ, ಖೋಟಾ ನೋಟುಗಳನ್ನು ಇಲ್ಲವಾಗಿಸುವುದು, ಕಪ್ಪು ಹಣದ ನಾಶ, ಭಯೋತ್ಪಾದನೆಯ ಮೂಲೋಚ್ಚಾಟನೆ ಎಂದು ಪರಿಭಾಷಿಸಿ ಆಸಕ್ತಿಕರ ಕಥನವನ್ನು ಮಹಾಜನತೆಗೆ ನೀಡಿದರು. ಅವರ ಉದ್ದೇಶ ಉದಾತ್ತವಾದದ್ದು ಎನ್ನುವ ವಾದವನ್ನು ಒತ್ತಾಯ ಪೂರ್ವಕವಾಗಿ ಮಾಡುವಲ್ಲಿ ಪ್ರಧಾನಮಂತ್ರಿಗಳು ಯಶಸ್ವಿಯಾದರು.

2016ರ ನವಂಬರ್ 16ರಂದು ಪ್ರಧಾನಮಂತ್ರಿಗಳು ದೂರದರ್ಶನದ ಮೇಲೆ ಮಾಡಿದ ಮೊದಲ ಘೋಷಣೆಯಲ್ಲಿ ಭಾವಾವೇಶವಿರಲಿಲ್ಲ. ಅದು ಕೇವಲ ನೀತಿಬದ್ಧ ಘೋಷಣೆಯಾಗಿತ್ತು. ಆದರೆ, 50 ದಿನಗಳ ಸಮಯಾವಕಾಶ ಕೇಳಿ ಕಣ್ಣೀರಿಟ್ಟು ಮಾಡಿದ ಭಾಷಣ ಅದಕ್ಕೊಂದು ತರ್ಕವನ್ನು, ಅದರ ಹಿಂದಿರುವ ಉದ್ದೇಶವನ್ನು, ಮತ್ತು ಅದರ ಪ್ರಾಮಾಣಿಕತೆಯನ್ನು ನಿರೂಪಿಸಲು ಯತ್ನಿಸಿತ್ತು. ಅದು ಪ್ರಾಮಾಣಿಕವೆನ್ನಿಸಿದ್ದರಿಂದ ಲೈನಿನಲ್ಲಿ ನಿಂತು ಕಷ್ಟಗಳನ್ನು ಅನುಭವಿಸಿದ ಮಹಾಜನತೆ ಪ್ರಧಾನಿಗಳ ಈ ಒತ್ತಾಯಕ್ಕೆ ಮಣಿದರು. ಪ್ರಧಾನಿಗಳ ಒತ್ತಾಯ ಫಲಪ್ರದವಾಯಿತು.

ಆದರೆ, ಕೃಷಿಕಾನೂನುಗಳನ್ನು ತಂದು ರೈತರ ವಿರೋಧವನ್ನು ಎದುರಿಸಿದ ಪ್ರಧಾನಮಂತ್ರಿಗಳು ಇದೇ ತಂತ್ರವನ್ನು ಬಳಸಿ ರೈತ ಚಳುವಳಿಗಾರರನ್ನು ಒತ್ತಾಯಿಸಬಹುದಿತ್ತೇ? ಅಥವಾ ಅದಕ್ಕೆ ಸರಿಯಾದ ಕಥನವಿರಲಿಲ್ಲವೇ? ಅಥವಾ ಕಥನಕ್ಕೂ ಒಂದು ನಂಬರ್ಹವಾದ ಚೌಕಟ್ಟು ಬೇಕಿತ್ತೇ? ಈ ಪುಸಕವನ್ನೋದಿದಾಗ ಈ ಎಲ್ಲ ವಿಚಾರಗಳೂ ನಮ್ಮ ಮನಸ್ಸಿಗೆ ಬರುತ್ತದೆ. ಹಾಗೂ ವಿಚಾರಗಳನ್ನು ಪರಿಗಣಿಸಿ ಚಿಂತಿಸಲು ನಮ್ಮನ್ನು ಒತ್ತಾಯಿಸುತ್ತದೆ. ●